**ದಿನಾಂಕಃ 23.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ ವಾದಿಪರ ವಕೀಲರಾದ ಶ್ರೀ.ಎಂ.ಎಸ್.ಜಿ ರವರಿಂದ**

ನಿಡಿ-9 ಕಾರ್ಬನ್ ನ ಪ್ರತಿ ಆಗಿದ್ದು, ಅದರ ಮೂಲ ಪ್ರತಿ ಎಲ್ಲಿದೆ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಡಿ-9 ರ ಪ್ರಕಾರ ನಾವು ಹಿಸ್ಸೆ ಆಗಿರುತ್ತೇವೆ. ಕೆರಿಯಪ್ಪ ನನ್ನ ತಂದೆ. ಶಿವಾನಂದ ಕುಗ್ವೆ ರವರು ಜುಬಾನಿ ಹಿಸ್ಸೆ ಪತ್ರವನ್ನು ಬರವಣಿಗೆ ಮಾಡಿದ್ದರು ಅದನ್ನು ಬೆರಳಚ್ಚು ಮಾಡಲು ನೀಡಿದ್ದು, ಸದರಿ ಬೆರಳಚ್ಚು ಪ್ರತಿ ನಿಡಿ-9.ಸದರಿ ಬರವಣಿಗೆ ಪ್ರತಿಯು ನನ್ನ ಮನೆಯಲ್ಲಿದೆ. ಅದನ್ನು ಮನೆಯಲ್ಲೇ ಬರವಣಿಗೆ ಮಾಡಿರುತ್ತಾರೆ. ಸದರಿ ಪ್ರತಿ ಮನೆಯಲ್ಲೇ ಇದೆ ಹುಡುಕಿದರೆ ಸಿಗಬಹುದು. ನಿಡಿ-9 ಅನ್ನು ಬೆರಳಚ್ಚು ಮಾಡಿದವರು ಯಾರು ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ-9 ಅನ್ನು ಮಧ್ಯಾಹ್ನ 12.00 ಗಂಟೆಯ ನಂತರ ಬರವಣಿಗೆ ಮಾಡಿರುತ್ತಾರೆ. ಮಾರನೆ ದಿನ ಬೆರಳಚ್ಚು ಮಾಡಿರಬಹುದು. ಶಿವಾನಂದ ಕುಗ್ವೆ ರವರು ಬರವಣಿಗೆ ಮಾಡಿದ್ದಾರೆ ಎಂದು ಎಲ್ಲೂ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-9 ರ ಮೊದಲ ಎರಡು ಹಾಳೆಗೆ ಸಹಿ ಇರುವುದಿಲ್ಲ ಎಂದರೆ ಸರಿ. ನಿಡಿ-9 ರ ಮೂರನೇ ಪುಟದಲ್ಲಿ ಹಾಕಿರುವಂತಹ ಹೆಬ್ಬೆಟ್ಟು ಯಾರದ್ದು ಎಂದು ಬರವಣಿಗೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನ್ನ ತಂದೆಯದ್ದು ಎಂದು ಉತ್ತರಿಸುತ್ತಾರೆ. ಶಿವಾನಂದ ಕುಗ್ವೆ ರವರು ಪದವೀಧರರು ಎಂದರೆ ಸಾಕ್ಷಿ ಅವರು ಎನೂ ಒದಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ಸಾಕ್ಷಿ ಮುಂದುವರೆದು ಈಗ ಅವರು ರಾಜ್ಯ ರೈತ ಸಂಘದ ಉಪಾಧ್ಯಕ್ಷರು ಎಂದು ಉತ್ತರಿಸುತ್ತಾರೆ.

ನಿಡಿ-9 ರ ಬರವಣಿಗೆ ಮಾಡಿದ ದಿನ 01.02.2000. ಸಾಕ್ಷಿ ಮುಂದುವರೆದು ಬೆಳಚ್ಚನ್ನು ಮಾರನೆ ದಿನ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಿಃ01.02.2000 ರಂದು ಕೈಯಲ್ಲಿ ಬರವಣಿಗೆ ಮಾಡಿರುತ್ತಾರೆ. ನನ್ನ ಅಣ್ಣ ತಮ್ಮಂದಿರ ಕ್ರಯ ವಿಕ್ರಯ ಗಳಲ್ಲಿ ಭಾಗಿಯಾಗಿ ಸಹಿಗಳನ್ನು ಹಾಕಿರುತ್ತೇನೆ ಎಂದರೆ ಸರಿ. ನಿಡಿ-9 ರ ಪ್ರಕಾರ ಖಾತೆ ಕಂದಾಯ ಮಾಡಿಕೊಳ್ಳಲು ಯಾವುದೇ ಅರ್ಜಿಯನ್ನು ಕಂದಾಯ ಇಲಾಖೆಗಳಿಗೆ ನೀಡಿರುವುದಿಲ್ಲ ಸಾಕ್ಷಿ ಮುಂದುವರೆದು 3 ನೇ ಪ್ರತಿವಾದಿ ಯಾವುದೇ ಅರ್ಜಿಯನ್ನು ನೀಡಲು ಎಷ್ಟು ಕೇಳಿಕೊಂಡರು ಬಂದಿರುವುದಿಲ್ಲ ಹಾಗಾಗಿ ಹಾಗೇ ಉಳಿಯಿತು ಎಂದು ಉತ್ತರಿಸುತ್ತಾರೆ. ಈ ರೀತಿ ಹಿಸ್ಸೆ ಮಾಡಿಕೊಂಡಿದ್ದೇವೆ ಎಂದು ಘೋಷಣಾತ್ಮಕ ಪರಿಹಾರ ದಾವೆಯನ್ನು ಹಾಕಿರುವುದಿಲ್ಲ. 3 ನೇ ಪ್ರತಿವಾದಿ ನನ್ನೊಂದಿಗೆ ಮಾತನಾಡುತ್ತಿರಲಿಲ್ಲ. ನಿಡಿ-9 ರ ದಿನಾಂಕದಿಂದಲೂ ಇವತ್ತಿನವರೆಗೂ 3 ನೇ

ಪ್ರತಿವಾದಿಯೊಂದಿಗೆ ಮಾತುಕತೆಯಾಗಲೀ, ತೆಗೆದುಕೊಳ್ಳುವುದು, ಕೊಡುವುದು, ಮನೆಗೆ ಹೋಗಿ ಬರುವುದಾಗಿಲೀ ಮಾಡುತ್ತಿಲ್ಲ. 3 ನೇ ಪ್ರತಿವಾದಿಯೊಂದಿಗೆ ಯಾವುದೇ ರೀತಿಯ ಬಾಂಧವ್ಯ ಇಲ್ಲ. ನಿಪಿ–5 ರಂತೆ ಕಂದಾಯ ಬಾಕಿ ಆಗಿ ಪಳಾ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಯವರು ಹಣ ಕಟ್ಟಿ ಪಳವನ್ನು ರದ್ದುಗೂಳಿಸಿಕೊಂಡಿರುತ್ತಾರೆ ಎಂದರೆ ಸರಿ. ಬ್ಯಾಂಕ ಸಾಲಗಳನ್ನು ಆಸ್ತಿ ಮೇಲೆ ಮಾಡಿರುತ್ತೇವೆ. ನನ್ನ ತಂದೆ ಬದುಕಿದ್ದಾಗಲೇ ಸ್ವಲ್ಪ ಸ್ವಲ್ಪ ಆಸ್ತಿಯನ್ನು ನನ್ನ ಹೆಸರಿನಲ್ಲಿ ಹಾಗೂ 3 ನೇ ಪ್ರತಿವಾದಿ ಹೆಸರಿನಲ್ಲಿ ಪ್ರತ್ಯೇಕವಾಗಿ ಸ್ವಾಧೀನತೆ ಹೊಂದಿ ಬರುತ್ತಿದ್ದೇವೆ. ಮಕ್ಕಳ ಹೆಸರಿಗೆ ಸ್ವಲ್ಪ ಜಮೀನು ಇರಲಿ ಎಂದು ಖಾತೆಗಳನ್ನು ಕೂಡ ಪ್ರತ್ಯೇಕವಾಗಿ ಮಾಡಿಕೊಂಡಿರುತ್ತೇವೆ. ಸಾಲ ತೆಗೆಯ ಬೇಕಾದ್ದಲ್ಲಿ ಮಕ್ಕಳ ಹೆಸರಿನಲ್ಲಿ ಇರಲಿ ಎಂದು ಮಾಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ.

3 ನೇ ಪ್ರತಿವಾದಿ ನೇತ್ರಾವತಿ ಎನ್ನುವವರೊಂದಿಗೆ ಮದುವೆ ಆಗಿದ್ದು ಆ ಮದುವೆಗೆ ನಾನು ಹೋಗಿರುತ್ತೇನೆ. ಈ ಮದುವೆಯ ಮೊದಲು ವಾದಿಯ ತಾಯಿ ಬಂಗಾರಮ್ಮ ರವರ ಮನೆಗೆ ಹೋಗಿ 3 ನೇ ಪ್ರತಿವಾದಿ ಉಳಿಯುತ್ತಿದ್ದರು ಎಂದರೆ ಸರಿಯಲ್ಲ. ನಾರಾಯಣಪ್ಪ, ಬಿ ಆರ್ ತಿಮ್ಮಪ್ಪ, ಶಿವಾನಂದ, ಗಣಪತಿ ರವರು ನಮ್ಮ ಊರಿನವರು. ದಿಃ 16.09.1990 ರಂದು ಈ ಮೇಲೆ ಹೇಳಿದ ವ್ಯಕ್ತಿಗಳ ಸಮ್ಮುಖದಲ್ಲಿ ನಮ್ಮ ಊರಿನ ನಾರಾಯಣ ದೇವಸ್ಥಾನದಲ್ಲಿ ವಾದಿಯ ತಾಯಿ ಹಾಗೂ 3 ನೇ ಪ್ರತಿವಾದಿಗೆ ಮದುವೆ ಆಗಿರುತ್ತದೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಾದಿಯ ತಾಯಿ ಹಾಗೂ 3 ನೇ ಪ್ರತಿವಾದಿಯ ಸಂಸಾರಿಕ ಜೀವನದಿಂದ ವಾದಿ ಜನಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಈ ಕೇಸಿನ ನೋಟೀಸು ಬಂದ ಬಳಿಕವೇ ಈ ವಿಚಾರ ಗೊತ್ತಾಗಿರುತ್ತದೆ ಎಂದು ಉತ್ತರಿಸುತ್ತಾರೆ.

ನನಗೂ 3 ನೇ ಪ್ರತಿವಾದಿಗೂ 3 ವರ್ಷಗಳ ಅಂತರವಿದೆ. ನನ್ನ ಹಾಗೂ 3 ನೇ ಪ್ರತಿವಾದಿಯ ನಡುವಿನಲ್ಲಿ ಒಂದು ಹೆಣ್ಣು ಮಗು ಹುಟ್ಟಿದ್ದು ಅದು ಬದುಕಿರಲಿಲ್ಲ. ನಾನು 18 ನೇ ವಯಸ್ಸಿನಲ್ಲಿ ಮದುವೆ ಆಗಿರುತ್ತೇನೆ. ನಿಡಿ–1 ರ ಸಮಯದಲ್ಲಿ 3 ನೇ ಪ್ರತಿವಾದಿಗೆ 37 ವರ್ಷ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ವಾದಿಯ ತಾಯಿ ನಮ್ಮ ಊರಿನವರು. ಅವರು ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಜಮೀನು ಕೂಡ ಇದೆ ಎಂದು ಉತ್ತರಿಸುತ್ತಾರೆ. 3 ನೇ ಪ್ರತಿವಾದಿಗೆ ಒಳ್ಳೆ ಕಡೆಯಿಂದ ಹೆಣ್ಣನ್ನು ತರಬೇಕೆಂದು ಮನಸ್ಸು ಇತ್ತು ಎಂದರೆ ಸರಿ. ವಾದಿಯ ತಾಯಿಯನ್ನು ಮದುವೆ ಆದ ಬಳಿಕ 1 ವರ್ಷದ ಮೇಲೆ ಮನೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ವಾದಿ ಆಕೆಯ ತಾಯಿಯ ಗರ್ಭದಲ್ಲಿದ್ದಾಗ ನಾವು ದುರ್ಬೋದನೆ ಮಾಡಿ ವಾದಿಯ ತಾಯಿ ಮನೆಯಿಂದ

3 ನೇ ಪ್ರತಿವಾದಿಯನ್ನು ಹೊರಗಡೆ ತಂದಿರುತ್ತೇವೆ ಎಂದರೆ ಸರಿಯಲ್ಲ. ನಿಡಿ–9 ರ ದಿನಾಂಕದಿಂದ ಇಂದಿನವರೆಗೂ 3 ನೇ ಪ್ರತಿವಾದಿಯೊಂದಿಗೆ ಯಾವುದೇ ಬಾಂಧವ್ಯವಾಗಲೀ ವಿಶ್ವಾಸವಾಗಲೀ ಉಳಿದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿರವಂತಹದ್ದು ಎಂದರೆ ಸರಿ. ನಮ್ಮ ಕುಟುಂಬವು ತುಂಬಾ ವರ್ಷಗಳಿಂದ ಆ ಊರಿನಲ್ಲಿದೆ ಎಂದರೆ ಸರಿ. ವಾದಿಯ ತಾಯಿ ನಮ್ಮ ಮೇಲೆ ಜೀವನಾಂಶ ಕೋರಿ 1990 ನೇ ಇಸವಿಯಲ್ಲಿ ದಾವೆ ಹೂಡಿದ್ದರು ಎಂದರೆ ಸರಿ. ತಮ್ಮನ ಪರವಾಗಿ ನಾನು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ವಾದಿ ಹಾಗೂ ವಾದಿಯ ತಾಯಿಗೆ ಜೀವನಾಂಶವನ್ನು 3 ನೇ ಪ್ರತಿವಾದಿ ಕೊಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 3 ನೇ ಪ್ರತಿವಾದಿ ಮನೆಗೆ ಹೋಗಿ ಪೂಲೀಸರು ಜಪ್ತಿ ಮಾಡಿಕೊಂಡು ಜೀವನಾಂಶವನ್ನು ವಸೂಲಿ ಮಾಡಲು ಕ್ರಮ ಕೈಗೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಾದಿ 3 ನೇ ಪ್ರತಿವಾದಿಯ ತಂದೆ ಎಂದರೆ ಸಾಕ್ಷಿ ನನಗೆ ಆ ವಿಚಾರ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಾದಿಗೆ ನಮ್ಮ ಆಸ್ತಿಗಳಲ್ಲಿ ಪಾಲ ನೀಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಿಡಿ–9 ಅನ್ನು ಹುತಾರು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು. ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ